ದಿಃ 15.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎಸ್.ಡಿ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ವಾದಿಯು ನನಗೆ ನೀಡಿರುವ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು. ದಿಃ 16.11.2011 ರ ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ದಿಃ 25.08.2012 ರ ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, Index of land ಅನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, Record of Right ಅನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 140 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 118/1 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 107 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 129/1 ಬಿ ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 105 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ದೇವವೃಂದ ಗ್ರಾಮದ ಸರ್ವೆ ನಂಬರ್ 140 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ಎಂ.ಆರ್. ನಂಬರ್ ಹೆಚ್.22/2015-16 ಅನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ಎಂ.ಆರ್.

ನಂಬರ್ ಹೆಚ್.10/2012-13 ಅನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು, ವಂಶವೃಕ್ಷದ ನೋಟರಿ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 14.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ **1** ರಿಂದ **5** ನೇ ಪ್ರತಿವಾದಿ ಪರವಾಗಿ</u>

3. ನನಗೆ ನನ್ನ ತಾಯಿಯ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಇದೆ, ನನ್ನ ತಾಯಿ ಆರೋಗ್ಯವಾಗಿದ್ದಾರೆ. ನನ್ನ ಅಜ್ಜನ ಹೆಸರು ವಸಂತ್ ಕುಮಾರ್. ನನ್ನ ಅಜ್ಜ ವಸಂತ್ ಕುಮಾರ್ ಮೂಲತಃ ಅಚ್ಚರಡಿ ಗ್ರಾಮದವರು ಎಂದರೆ ಸರಿ. ನನ್ನ ಅಜ್ಜನಿಗೆ ಸೇರಿದ ಜಮೀನುಗಳು ಅಚ್ಚರಡಿ ಮತ್ತು ಚಕ್ಕೂಡಿಗೆ ಗ್ರಾಮದಲ್ಲಿ ಬರುತ್ತವೆ ಎಂದರೆ ಸರಿ. ಆ ಆಸ್ತಿಗಳು ನನ್ನ ಅಜ್ಜನಿಗೆ ಮಲ್ಲಯ್ಯ ರವರಿಂದ ಬಂದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ವಸಂತ್ ಕುಮಾರ್ ಮದುವೆಯಾದ ಬಳಿಕ ಮನೆ ಅಳಿಯನಾಗಿ ದೇವವೃಂದ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿ.
4. ದೇವವೃಂದ ಗ್ರಾಮದಲ್ಲಿ ಇರುವ ಆಸ್ತಿಗಳು ನಮ್ಮ ಅಜ್ಜಿಗೆ ಆಕೆಯ ತಂದೆ ಕಡೆಯಿಂದ ಬಂದ ಆಸ್ತಿಗಳು ಎಂದರೆ ಸರಿ. ಪುಟ್ಟಮ್ಮ ನನ್ನ ಅಜ್ಜಿಯ ತಾಯಿ ಎಂದರೆ ಸರಿ. ಪುಟ್ಟಮ್ಮನ ತಂದೆಯ ಹೆಸರು ಬುರುಡಿ ರಾಮಯ್ಯ ಎಂದರೆ ಸರಿ. ಬುರುಡಿ ರಾಮಯ್ಯ ರವರಿಗೆ ಪುಟ್ಟಮ್ಮ ಒಬ್ಬಳೇ ಮಗಳು ಎಂದರೆ ಸರಿ. ಪುಟ್ಟಮ್ಮ ರವರನ್ನು ಗಿಂಡಿ ಬೈರಯ್ಯ ಎಂಬುವವರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ತಾಯಿ ಪುಟ್ಟಮ್ಮ ರವರು ಎಂದರೆ ಸರಿ. ಗಿಂಡಿ ಬೈರಯ್ಯ ರವರು ಸಹ ಪುಟ್ಟಮ್ಮ ರವರನ್ನು ಮದುವೆ ಮಾಡಿಕೊಂಡ ಬಳಿಕ ಮನೆ ಅಳಿಯನಾಗಿ ಬಂದಿದ್ದರು ಎಂದರೆ ಸರಿ. ಗಿಂಡಿ ಬೈರಯ್ಯ ರವರು ಮನೆ ಅಳಿಯನಾಗಿ ಬಂದ ಕಾರಣ ದಾವ ಐಟಂ ನಂಬರ್ 5 ರಿಂದ 8 ಅನ್ನು ಅವರಿಗೆ ನೀಡಲಾಗಿತ್ತು ಎಂದರೆ ಸರಿ. ಗಿಂಡಿ ಬೈರಯ್ಯ ಮತ್ತು ಪುಟ್ಟಮ್ಮ ರವರಿಗೆ 1 ನೇ ಪ್ರತಿವಾದಿ ಮಂಜಮ್ಮ ಒಬ್ಬಳೇ ಮಗಳು ಎಂದರೆ ಸರಿ.
5. ಪುಟ್ಟಮ್ಮ ರವರು ಮೃತಪಟ್ಟ ಬಳಿಕ ಆತನ ಮಗಳಾದ 1 ನೇ ಪ್ರತಿವಾದಿಗೆ

ಐಟಂ ನಂಬರ್ 1 ರಿಂದ 4 ಬಂದಿದ್ದವು ಎಂದರೆ ಸರಿ. ಐಟಂ ನಂಬರ್ 1 ರಿಂದ 4 ರ ಮೇಲೆ ನನ್ನ ಅಜ್ಜಿ ಪುಟ್ಟಮ್ಮ ರವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರಲಿಲ್ಲ ಎಂದರೆ ಸರಿ. ಐಟಂ ನಂಬರ್ 1 ರಿಂದ 3 ಅನ್ನು ನಮ್ಮ ಅಜ್ಜಿ ಪುಟ್ಟಮ್ಮ ರವರು ದಿಃ 16.11.2021 ರಂದು 3 ಮತ್ತು 4 ನೇ ಪ್ರತಿವಾದಿಯರಿಗೆ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಐಟಂ ನಂಬರ್ 4 ಅನ್ನು ನನ್ನ ಅಜ್ಜಿ ಪುಟ್ಟಮ್ಮ ರವರು 5 ನೇ ಪ್ರತಿವಾದಿಗೆ ದಿಃ 25.08.2012 ರಂದು ಕ್ರಯ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ದಾವ ಐಟಂ ನಂಬರ್ 1 ರಿಂದ 3 ಈಗ 3 ಮತ್ತು 4 ನೇ ಪ್ರತಿವಾದಿಯರ ಹೆಸರಿನಲ್ಲಿ ಇವೆ ಎಂದರೆ ಸರಿ. ದಾವ ಐಟಂ ನಂಬರ್ 4 ಈಗ 5 ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವ ಐಟಂ ನಂಬರ್ 1 ರಿಂದ 4 ನನ್ನ ಅಜ್ಜಿ ಪುಟ್ಟಮ್ಮ ರವರಿಗೆ ಆಕೆಯ ತಾಯಿಯ ಮನೆಯಿಂದ ಬಂದ ಕಾರಣ ಅದನ್ನು ಮಾರಾಟ ಮಾಡುವ ಮತ್ತು ದಾನ ಮಾಡುವ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ.

6. ಅಚ್ಚರಡಿ ಮತ್ತು ಚಕ್ಕೂಡಿ ಗ್ರಾಮದಲ್ಲಿ ಇರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ನನ್ನ ತಾಯಿಯನ್ನು ಸಹ ಪಕ್ಷಗಾರಳನ್ನಾಗಿ ಮಾಡಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆ ಇದೇ ನ್ಯಾಯಾಲಯದಲ್ಲಿ O.S.3/2023 ರಂತೆ ವಿಚಾರಣೆಯಲ್ಲಿ ಇದೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಾಯಿ ಹಾಜರಾಗಿಲ್ಲ. ಆ ದಾವೆಯಲ್ಲಿ ನನ್ನ ತಾಯಿ ಈ ಕೇಸಿನ ವಕೀಲರನ್ನೇ ನೇಮಿಸಿಕೊಂಡಿದ್ದಾರೆ. ಆ ದಾವೆಯಲ್ಲಿ ನಾವು ತಕರಾರನ್ನು ಸಲ್ಲಿಸಿಲ್ಲ. ದಾವ ಐಟಂ ನಂಬರ್ 5 ರಿಂದ 8 ನಮ್ಮ ತಾತನ ತಂದೆ ಗಿಂಡಿ ಬೈರಯ್ಯ ರವರು ಮೃತಪಟ್ಟ ಬಳಿಕ ನನ್ನ ಅಜ್ಜ ವಸಂತ್ ಕುಮಾರ್ ರವರ ಹೆಸರಿಗೆ ಖಾತೆಯಾಗಿದ್ದವು ಎಂದರೆ ಸರಿ. ನನ್ನ ತಾತ ವಸಂತ್ ಕುಮಾರ್ ರವರು ಈಗ ಬದುಕಿಲ್ಲ ಎಂದರೆ ಸರಿ. ನನ್ನ ತಾತ ವಸಂತ್ ಕುಮಾರ್ ಮೃತಪಟ್ಟ ಬಳಿಕ ಈಗ

ದಾವ ಐಟಂ ನಂಬರ್ 5 ರಿಂದ 8 ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿವೆ ಎಂದರೆ ಸರಿ.

7. ದಾವ ಐಟಂ ನಂಬರ್ 1 ರಿಂದ 4 ರಲ್ಲಿ ಪಾಲು ಕೇಳುವ ಹಕ್ಕು ನಮ್ಮ ತಾಯಿಗೆ ಇಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂಬರ್ 5 ರಿಂದ 8 ರಲ್ಲಿ ತಮಗೂ ಸಹ ಪಾಲನ್ನು ನೀಡಬೇಕು ಎಂದು ಪ್ರತಿವಾದಿಗಳು ಈ ದಾವೆಯಲ್ಲಿ ಕೋರಿದ್ದಾರೆ ಎಂದರೆ ಸರಿ. ದಾವ ಐಟಂ ನಂಬರ್ 5 ರಿಂದ 8 ರಲ್ಲಿ ನನ್ನ ತಾಯಿ ವಾದಿಯನ್ನು ಸೇರಿಸಿ ಪ್ರತಿವಾದಿಯರು ಎಲ್ಲರು ಸಹ ಸಮಾನ ಹಕ್ಕು ಇದೆ ಎಂದರೆ ಸರಿ. ದಾವ ಐಟಂ ನಂಬರ್ 1 ರಿಂದ 4 ರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ, ಆ ಆಸ್ತಿಗಳು 3 ರಿಂದ 5 ನೇ ಪ್ರತಿವಾದಿಯರಿಗೆ ಮಾತ್ರ ಸೇರಿರುತ್ತವೆ ಎಂದರೆ ಸರಿಯಲ್ಲ. ದಾವ ಐಟಂ ನಂಬರ್ 1 ರಿಂದ 4 ರ ಮೇಲೆ ನಮ್ಮ ತಾಯಿಗೆ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ಪ್ರತಿವಾದಿಯರಿಗೆ ತೊಂದರೆ ನಿಡಲು ಈ ದಾವೆಯನ್ನು ತಂದಿದ್ದೇವೆ ಎಂದರೆ ಸರಿಯಲ್ಲ. ನಾವು ಹೇಳಿದಂತೆ ದಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ